# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿ.ಇ/789/2016//ಎಆರ್‌ಇ–10.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 19/02/2022.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ,** ಅಪರ ನಿಬಂಧಕರು ವಿಚಾರಣೆಗಳು–10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀಮತಿ ಪ್ರೇಮಲತಾ ಆಳ್ವ,** ಉಪ ತಹಶೀಲ್ದಾರ್ **(ನಿವೃತ್ತ)** ಗುರುಪುರ ನಾಡಕಛೇರಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

**ಉಲ್ಲೇಖ:** **1.**ಕಂಪ್ಲೆಂಟ್/ಉಪಲೋಕ್/ಎಂವೈಎಸ್–7405/2014/ಅನಿವಿ–7 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 14/09/2016.
**2.**ಸರ್ಕಾರದ ಆದೇಶ ಸಂಖ್ಯೆ: ಕಂಇ 281 ಬಿಎಂಎಂ/2016 ಬೆಂಗಳೂರು, ದಿನಾಂಕ: 14/12/2016.
**3.**ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ–789/2016, ಬೆಂಗಳೂರು ದಿನಾಂಕ: 31.12.2016.

* * * *

1) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, **ದೂರುದಾರರಾದ ಶ್ರೀ ಎಫ್ರೆಮ್ ರೊಡ್ರಿಗಸ್,** ಪ್ರಶಾಂತ್ ಭಾಗ್, ಪಡೀಲ್ ಅಂಚೆ, ಮಂಗಳೂರು ರವರು (1) **ಶ್ರೀಮತಿ ಪ್ರಮೀಳ ಆಳ್ವ,** ಉಪ ತಹಶೀಲ್ದಾರ್, ಗುರುಪುರ ನಾಡಕಛೇರಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಹಾಗೂ **(2) ಡಾ: ವಿಜಯಪ್ರಕಾಶ್,** ಹಿಂದಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ ( ಇನ್ನು ಮುಂದೆ ಕ್ರಮವಾಗಿ ಎದುರುದಾರ–1 ಮತ್ತು 2 ಎಂದು ಕರೆಯಲ್ಪಡುವರು ) ರವರುಗಳ ವಿರುದ್ಧ ದೂರು ಸಲ್ಲಿಸಿ 1 ಮತ್ತು 2ನೇ ಎದುರುದಾರರು ತಮ್ಮ ಅಧಿಕಾರಾವಧಿಯಲ್ಲಿ ಕರ್ತವ್ಯಲೋಪವೆಸಗಿದ್ದಾರೆಂದು ಆರೋಪಿಸಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9

ರಡಿಯಲ್ಲಿ ಪರದತ್ತವಿರುವ ಅಧಿಕಾರ ಚಲಾಯಿಸಿ ವಿಚಾರಣೆಗೆ ತೆಗೆದುಕೊಂಡು ತನಿಖೆ ಕೈಗೊಂಡಿರುತ್ತಾರೆ. ಸದರಿ ದೂರಿನಲ್ಲಿ 2010–11 ಮತ್ತು 2011–12ನೇ ಸಾಲಿನಲ್ಲಿ ಪಡುಪೆರಾರ ಗ್ರಾಮ ಪಂಚಾಯತ್‌ನಲ್ಲಿ ಸುಮಾರು ಲಕ್ಷಕ್ಕೂ ಮೀರಿ ಸಾರ್ವಜನಿಕ ತೆರಿಗೆಯ ಹಣ ದುರುಪಯೋಗ ಆಗಿರುವುದು ಕಂಡುಬಂದಿರುತ್ತದೆ ಮತ್ತು ಸದರಿ ಹಣದ ದುರುಪಯೋಗ 1ನೇ ಎದುರುದಾರರ ಅವಧಿಯಲ್ಲಿ ನಡಿದಿರುತ್ತದೆ ಮತ್ತು ಆ ಹಣವನ್ನು ಪಂಚದಾಯತ್ ಖಾತಗೆ ಕಟ್ಟಿದ ಬಗ್ಗೆ ದಾಖಲೆ ಲಭ್ಯವಿರುವುದಿಲ್ಲವೆಂದು ಮಾಹಿತಿ ಅಧಿಕಾರಿ ಮಾಹಿತಿ ನೀಡಿರುತ್ತಾರೆ. ಕರ್ನಾಟಕ ಸರ್ಕಾರ ಹೊರಡಿಸಿದ ಸುತ್ತೋಲೆಯ ಪ್ರಕಾರ ರೂ. 10,000/– ಕ್ಕಿಂತ ಅಧಿಕ ಮೊತ್ತದ ತಾತ್ಕಲಿಕ ಹಣ ದುರುಪಯೋಗಕ್ಕೆ ಕಾಲವೇತನ ಶ್ರೇಣಿಯ ಹುದ್ದೆಯ ಕೆಳಗಿನ ಹಂತಕ್ಕೆ ಇಳಿಸುವಂತಹ ಶಿಕ್ಷೆ ವಿಧಿಸಬೇಕಾದ ಮೇಲಾಧಿಕಾರಿಯವರು ಬದಲಾಗಿ ಎದುರುದಾರರಿಗೆ ಉಪ ತಹಶೀಲ್ದಾರರಿಗೆ ಬಡ್ತಿಯನ್ನು ನೀಡಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ದೂರನ್ನು ತನಿಖೆ ಕೈಗೊಳ್ಳಲು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರಿಗೆ ಆದೇಶಿಸಿದ್ದು ಅದರಂತೆ ತನಿಖಾಧಿಕಾರಿಗಳು ತನಿಖೆ ಕೈಗೊಂಡು 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳದೆ ಕೇವಲ ಎಚ್ಚರಿಕೆ ನೋಟಿಸ್ ನೀಡಿ ಆಪಾದಿತರ ಸಕ್ಷಮ ಪ್ರಾಧಿಕಾರವಾದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರಿಗೆ ಮಾಹಿತಿ ನೀಡದೇ 1ನೇ ಎದುರುದಾರರಿಗೆ ಪರೋಕ್ಷವಾಗಿ ಸಹಕರಿಸಿದ 2ನೇ ಎದುರುದಾರರ ಮತ್ತು 1ನೇ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2) ತನಿಖಾಧಿಕಾರಿಯವರ ವರದಿಯನ್ನು ಪಡೆದ ನಂತರ 1 ಮತ್ತು 2ನೇ ಎದುರುದಾರರ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 1ನೇ ಎದುರುದಾರರ ಆಕ್ಷೇಪಣೆ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದ್ದು ಇಲಾಖಾ ವಿಚಾರಣೆ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು ಎದುರುದಾರ–1 ಮತ್ತು 2 ರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966 ಕಲಂ 3(1)(ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ

ಬಾಧ್ಯರಾಗಿದ್ದಾರೆಂದು, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 14/12/2016 ರಂದು ಮಾನ್ಯ ಉಪಲೋಕಾಯುಕ್ತ-1 ರವರಿಗೆ 1ನೇ ಎದುರುದಾರರು ಈಗಾಗಲೇ ನಿವೃತ್ತಿ ಹೊಂದಿದ್ದು ಸದರಿಯವರ ವಿರುದ್ಧ ಕರ್ನಾಟಕ ನಾಗರಿಕ ಸೇವಾನಿಯಮಗಳು 214(2)(ಬಿ)(i) ರನ್ವಯ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-2 ರವರು ದಿನಾಂಕ 31/12/2016 ರಂದು ಅಪರ ನಿಬಂಧಕರು, ವಿಚಾರಣೆಗಳ-10 ರವರಿಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ನಾಮನಿರ್ದೇಶನ ಮಾಡಿರುತ್ತಾರೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ ಶ್ರೀಮತಿ ಪ್ರೇಮಲತಾ ಆಳ್ವ, ಉಪ ತಹಶೀಲ್ದಾರ್, ಗುರುಪುರ ನಾಡಕಛೇರಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು-10 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು **ಆ.ಸ.ನೌ** ರವರಿಗೆ ದಿನಾಂಕ 31/01/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ***ಅನುಬಂಧ-1***
## ***ದೋಷಾರೋಪಣೆ-1***

1ನೇ ಆಪಾದಿತ ನೌಕರರಾದ **ಶ್ರೀಮತಿ ಪ್ರೇಮಲತ ಆಳ್ವ**, ಉಪತಹಸೀಲ್ದಾರ್, ಗುರುಪುರ ನಾಡಕಚೇರಿ, ಮಂಗಳೂರು, ದ.ಕ.ಜಿಲ್ಲೆ ಆದ ನೀವು 2010-11 ಮತ್ತು 2011-12ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕು ಪಡುಪೆರಾರು ಗ್ರಾಮಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಓರ್ವ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ಪಂಚಾಯಿತಿಯ ಹಣ ದುರುಪಯೋಗ ಮಾಡಿ ಕರ್ತವ್ಯಲೋಪ ಎಸಗಿರುತ್ತೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1) (ii) ಮತ್ತು (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯುಟೇಷನ್ ಆಫ್ ಮಿಸ್‌ಕಾಂಡೆಕ್ಟ್)

2. 2010-11 ಮತ್ತು 2011-12 ನೇ ಸಾಲಿನಲ್ಲಿ ಪಡುಪೆರಾರ ಗ್ರಾಮ ಪಂಚಾಯತ್ ನಲ್ಲಿ ಸುಮಾರು ಲಕ್ಷಕ್ಕೂ ಮೀರಿ ಸಾರ್ವಜನಿಕ ತೆರಿಗೆಯ ಹಣ ದುರುಪಯೋಗ ಆಗಿರುವುದು ಕಂಡು ಬಂದಿರುತ್ತದೆ ಮತ್ತು ಸದರಿ ಹಣದ ದುರುಪಯೋಗ ಆಗಿರುವುದು ಕಂಡು ಬಂದಿರುತ್ತದೆ ಮತ್ತು ಸದರಿ ಹಣದ ದುರುಪಯೋಗ ಆ.ಸ.ನೌಕರರ ಅವಧಿಯಲ್ಲಿ ನಡೆದಿರುತ್ತದೆ ಮತ್ತು ಆ ಹಣವನ್ನು ಪಂಚಾಯತ್ ಖಾತೆಗೆ ಕಟ್ಟಿದ ಬಗ್ಗೆ ದಾಖಲೆ ಲಭ್ಯವಿರುವುದಿಲ್ಲವೆಂದು ಮಾಹಿತಿ ಅಧಿಕಾರಿ ಮಾಹಿತಿ ನೀಡಿರುತ್ತಾರೆ. ಕರ್ನಾಟಕ ಸರ್ಕಾರ ಹೊರಡಿಸಿದ ಸುತ್ತೋಲೆಯ ಪ್ರಕಾರ ರೂ.10,000/- ಕ್ಕಿಂತ ಅಧಿಕ ಮೊತ್ತದ ತಾತ್ಕಾಲಿಕ ಹಣ ದುರುಪಯೋಗಕ್ಕೆ ಕಾಲವೇತನ ಶ್ರೇಣಿಯ ಹುದ್ದೆಯ ಕೆಳಗಿನ ಹಂತಕ್ಕೆ ಇಳಿಸುವಂತಹ ಶಿಕ್ಷೆ ವಿಧಿಸಬೇಕಾದ ಮೇಲಾಧಿಕಾರಿಯವರು ಬದಲಾಗಿ ಆಪಾದಿತ ಸರ್ಕಾರಿ ನೌಕರರಿಗೆ ಬಡ್ತಿಯನ್ನು ನೀಡಿರುತ್ತಾರೆ. ಆದ್ದರಿಂದ ಆ.ಸ.ನೌಕರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

3. ಸದರಿ ದೂರನ್ನು ದಾಖಲು ಮಾಡಿಕೊಂಡ ನಂತರ, ದೂರಿನಲ್ಲಿನ ಸತ್ಯಾಂಶ ಅರಿಯಲು, ದೂರಿನ ತನಿಖೆ ಮತ್ತು ವರದಿಗಾಗಿ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರಿಗೆ ಆದೇಶಿಸಲಾಗಿತ್ತು. ಅದರಂತೆ ಸದರಿಯವರು ಮಂಗಳೂರು

ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಸಂಬೋಧಿಸಲಾಗುವುದು) ರವರಿಂದ ದೂರಿನ ಮೇಲೆ ತನಿಖೆ ಮಾಡಿಸಿ, ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

4. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ, 2010-11 ಮತ್ತು 2011-12 ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕು ಪಡುಪೆರಾರು ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿದ್ದ ಆಪಾದಿತ ಸರ್ಕಾರಿ ನೌಕರರು ಓರ್ವ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ತನ್ನ ಕರ್ತವ್ಯ ಮರೆತು ಪಂಚಾಯಿತಿಯ ಹಣವನ್ನು ದುರುಪಯೋಗ ಮಾಡಿದ ಬಗ್ಗೆ ವಿಚಾರಣೆಯಿಂದ ತಿಳಿದು ಬಂದಿರುತ್ತದೆ. ಆದ್ದರಿಂದ ಆ.ಸ.ನೌಕರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕೋರಿದ್ದಾರೆ.

5. ತನಿಖಾಧಿಕಾರಿಯವರ ವದಿಯನ್ನು ಪಡೆದ ನಂತರ, ಆ.ಸ.ನೌಕರರ ಆಕ್ಷೇಪಣೆಯನ್ನು ಕೇಳಲಾಯಿತು. ಅದರಂತೆ, ಆ.ಸ.ನೌಕರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

6. ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ, ತಾನು ಪಡುಪೆರಾರ ಗ್ರಾಮಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಸದರಿ ಗ್ರಾಮ ಪಂಚಾಯತಿಯಲ್ಲಿ ಸಿಬ್ಬಂದಿಯಾದ ಕು: ಗಾಯತ್ರಿ ರವರು ದಿ:01/04/2008 ರಿಂದ 30/09/2011 ರವರಿಗೆ ರೂ.2,47,482/- ಮೊತ್ತವನ್ನು ದುರುಪಯೋಗಪಡಿಸಿದ್ದು, ಸದರಿ ಮೊತ್ತದ ಪೈಕಿ ರೂ.1,45,235/-ನ್ನು ತನ್ನಿಂದ ಜಮೆ ಮಾಡಿಸಲಾಗಿದ್ದು, ಈ ಬಗ್ಗೆ ತನಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದ.ಕ. ಜಿಲ್ಲಾ ಪಂಚಾಯತ್ ರವರ ಆದೇಶ ದಿ: 30/03/2013 ರಂದು ತನಗೆ ಎಚ್ಚರಿಕೆ ನೀಡಿರುತ್ತಾರೆ. ತಾನು ಸದರಿ ಗಾಯತ್ರಿರವರು ನಡೆಸಿದ ಸಾರ್ವಜನಿಕ ಹಣ ದುರುಪಯೋಗದಲ್ಲಿ ಯಾವುದೇ ರೀತಿಯಲ್ಲಿ ಭಾಗಿಯಾಗಿರುವುದಿಲ್ಲ. ಉಪತಹಸೀಲ್ದಾರರ ಹುದ್ದೆಗೆ ತನಗೆ ನೀಡಿದ ಭಡ್ತಿಯು ತನ್ನ ವಿದ್ಯಾರ್ಹತೆ, ಸರ್ಕಾರ ನಿಗದಿಪಡಿಸಿದ ಸೇವಾ ಹಿರಿತನ ಮತ್ತು ಇತರೆ ಅಂಶಗಳನ್ನು ಪರಿಗಣಿಸಲ್ಪಟ್ಟು ನೀಡಿದ್ದಾಗಿರುತ್ತದೆ ಎಂದು ತಿಳಿಸಿದ್ದಾರೆ.

7. ಆದರೆ ಆಪಾದಿತ ನೌಕರರು ತಮ್ಮ ಆಕ್ಷೇಪಣೆಯಲ್ಲಿ ದೂರನ್ನು ಕೈಬಿಡಲು ಅಥವಾ ತಡೆಹಿಡಿಯಲು ಯಾವುದೇ ಸೂಕ್ತ ಅಥವಾ ಸಮಾಧಾನಕಾರಕ ಕಾರಣ ತೋರಿಸಿಲ್ಲ.

8. ಆದುದರಿಂದ, ಕಡತದಲ್ಲಿನ ಆಧಾರಗಳಿಂದ, ಈ ಕೆಳಕಂಡ ಅಂಶಗಳು ಸ್ಪಷ್ಟವಾಗುತ್ತವೆ.

ಅ)2010–11 ಮತ್ತು 2011–12ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕು ಪಡುಪೆರಾರು ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿದ್ದ ಆ.ಸ.ನೌಕರರು ಓರ್ವ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ಪಂಚಾಯತಿಯ ಹಣವನ್ನು ದುರುಪಯೋಗ ಮಾಡಿ ಕರ್ತವ್ಯಲೋಪ ಎಸಗಿದ್ದಾರೆ.

ಆ)2ನೇ ಆ.ಸ.ನೌಕರರು, 1ನೇ ಆ.ಸ.ನೌಕರರು ಮತ್ತು ಇತರರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳದೇ ಕೇವಲ ಎಚ್ಚರಿಕೆ ನೋಟೀಸು ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿ ಕರ್ತವ್ಯಲೋಪ ಎಸಗಿರುತ್ತಾರೆ.

ಇ)1ನೇ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳದೇ ಕೇವಲ ಎಚ್ಚರಿಕೆ ನೋಟೀಸ್ ನೀಡಿ, ಆಪಾದಿತ ಸಕ್ಷಮ ಪ್ರಾಧಿಕಾರವಾದ ದ.ಕ. ಜಿಲ್ಲಾಧಿಕಾರಿಯವರಿಗೆ ಮಾಹಿತಿ ನೀಡದೇ ಇದ್ದರಿಂದ ಹಾಗೂ ಅವರ ವಾರ್ಷಿಕ ನಿರ್ವಹಣಾ ವರದಿಯಲ್ಲಿ ಪ್ರತಿಕೂಲ ಷರಾ ನಮೂದಿಸದೆ ಇರುವುದರಿಂದ, 1ನೇ ಆಪಾದಿತ ನೌಕರರಿಗೆ ಬಡ್ತಿ ನೀಡಲು ಪರೋಕ್ಷವಾಗಿ ಸಹಕರಿಸಿ, 2ನೇ ಆಪಾದಿತ ನೌಕರರು ಕರ್ತವ್ಯಲೋಪವೆಸಗಿದ್ದಾರೆ.

9. ದೂರು, ತನಿಖಾ ವರದಿ, ಆ.ಸ.ನೌಕರರ ಆಕ್ಷೇಪಣೆ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡು ಬಂದಿದ್ದು, ಆ.ಸ.ನೌಕರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

19/2/20

**10.** ಆದ್ದರಿಂದ ಸಂಗ್ರಹವಾಗಿರುವ ಸಂಗತಿಗಳು, ಮಾಹಿತಿ, ದಾಖಲಾತಿ ಹಾಗೂ ಆಧಾರಗಳಿಂದ 1 ಮತ್ತು 2ನೇ ಆಪಾದಿತ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(1)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ವರ್ತನೆ/ದುರ್ನಡತೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 2ನೇ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಹಾಗೂ 1ನೇ ಆ.ಸ.ನೌಕರರು ದಿ:31/07/2016 ರಂದು ನಿವೃತ್ತಿ ಹೊಂದಿರುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳು 214(2)(ಬಿ)(i) ರ ಅಡಿಯಲ್ಲಿ 1ನೇಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಫಾರಸ್ಸು ಮಾಡಲಾಗಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು 10) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮ ವಿರುದ್ಧ ಈ ಮೇಲ್ಕಂಡ ಆಪಾದನೆ.**

4) ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌ ರವರಿಗೆ ಕಳುಹಿಸಿದ್ದು, ದಿನಾಂಕ 20/02/2017 ರಂದು ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಿದ್ದು ಸದರಿಯವರ ಪ್ರಥಮ ಮೌಖಿಕ ಹೇಳಿಕೆಯನ್ನು ಪಡೆಯಲಾಗಿರುತ್ತದೆ ನಿಯಮ–11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5) ಆಪಾದಿತ ಸರ್ಕಾರಿ ನೌಕರರು ದಿನಾಂಕ 26/07/2017 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ ತಾನು ದಿನಾಂಕ 01.04.2008 ರಿಂದ 14.10.2009 ರವರೆಗೆ ಮತ್ತು 18.07.2010 ರಿಂದ

28.02.2011 ರವರೆಗೆ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಪಡುಪೆರಾರ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದಾಗಿ, ಸದರಿ ಅವಧಿಯಲ್ಲಿ ಬಿಲ್ಲುಗಳನ್ನು ಪಡೆಯುವುದು, ಹಣ ಪಡೆಯುವುದು ಹಣ ಸಂದಾಯ ಮಾಡುವುದನ್ನು ಕುಮಾರಿ ಗ್ರಾಯತ್ರಿ, ತಾತ್ಕಲಿಕ ಸಿಬ್ಬಂದಿಯವರಿಗೆ ವಹಿಸಿದ್ದು ಸದರಿ ಕುಮಾರಿ ಗಾಯತ್ರಿರವರು ಹಣ ದುರುಪಯೋಗ ಮಾಡಿರುತ್ತಾರೆಂದು, ತಾವು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ.

6) ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತನಿಖಾಧಿಕಾರಿಗಳಾದ **ಶ್ರೀ ಸುಧಾಮ ಬೊಮ್ಮಯ್ಯ ನಾಯಕ್**, ಅಂದಿನ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ಮತ್ತು ನಿ.ಪಿ-9 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ವಿಚಾರಣಾ ಪ್ರಾಧಿಕಾರದ ಮುಂದೆ ಆ.ಸ.ನೌ ರವರು ಗೈರು ಹಾಜರಾಗಿರುವುದರಿಂದ, ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುವುದಿಲ್ಲ.

7) ಆ.ಸ.ನೌ ರವರು ಗೈರುಹಾಜರಾಗಿ ಪಿಡಬ್ಲ್ಯೂ-1 ರವರ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಗಿರುತ್ತದೆ ಹಾಗೂ ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ ಮತ್ತು ಲಿಖಿತ ವಾದವನ್ನು ಸಹ ಸಲ್ಲಿಸಿರುವುದಿಲ್ಲ.

8) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವಿವಾದವನ್ನು ಆಲಿಸಲಾಯಿತು.

9) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ-2:** ಆದೇಶವೇನು?

10) ವಾದವಿವಾದ ಆಲಿಸಿದ ನಂತರ ಕಡವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1) ಸಕಾರಾತ್ಮಕವಾಗಿ.**

**ಅಂಶ–2)** ಅಂತಿಮ ಆದೇಶದಂತೆ.

## <u>ಕಾರಣಗಳು</u>

12) **ಅಂಶ–1:** ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತನಿಖಾಧಿಕಾರಿಗಳಾದ **ಶ್ರೀ ಸುಧಾಮ ಬೊಮ್ಮಯ್ಯ ನಾಯಕ್**, ಅಂದಿನ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರನ್ನು ಪಿ.ಡಬ್ಲ್ಯೂ–1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–1 ಮತ್ತು ನಿ.ಪಿ–18 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

13) ತನಿಖಾಧಿಕಾರಿ ಪಿಡಬ್ಲ್ಯೂ–1 ಶ್ರೀ. ಸುಧಾಮ್ ಬೊಮ್ಮಯ್ಯ ನಾಯಕ್ ರವರು ತಮ್ಮ ಮುಖ್ಯವಿಚಾರಣೆಯಲ್ಲಿ, ತಾನು ಜುಲೈ 2015 ರಿಂದ ಜನವರಿ 2017 ರವರೆಗೆ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ 16.11.2015 ರಂದು ತನಗೆ ಬೆಂಗಳೂರು ಲೋಕಾಯುಕ್ತ ಕಛೇರಿಯಿಂದ ದೂರುದಾರ ಶ್ರೀ **ಎಫ್ರೆಮ್ ರೊಡ್ರಿಗಸ್** ರವರು ಸಲ್ಲಿಸಿದ್ದ ಕರ್ತವ್ಯಲೋಪದ ದೂರನ್ನು ತನಿಖೆ ಕೈಗೊಂಡು ವರದಿ ಸಲ್ಲಿಸಲು ಸೂಚಿಸಿದರ ಮೇರೆಗೆ, ತಾನು ದಿನಾಂಕ 09.12.2015 ರಂದು ಪಡುಪೆರಾರ ಗ್ರಾಮಪಂಚಾಯತಿಗೆ ಬೇಟಿ ನೀಡಿ, ಕ್ಯಾಷ್ ಪುಸ್ತಕದ ಪ್ರತಿ, ಹಾಜರಾತಿ ಪ್ರತಿ, ಬ್ಯಾಂಕ್ ಪುಸ್ತಕದ ಪ್ರತಿ, ಅಡಿಟ್ ವರದಿ, ತಿಂಗಳ ವರದಿ, ಇನ್ಸ್‌ಪೆಕ್ಷನ್ ವರದಿ, ಪಂಚಾಯತಿಯ ಠಾರವು ಮತ್ತು ಇತರ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಗಿ, 2010–11 ಮತ್ತು 2011–12 ನೇ ಸಾಲಿಗೆ ಸಂಬಂಧಿಸಿದಂತೆ, ಆಪಾದಿತ ಸರ್ಕಾರಿ ನೌಕರರು ತೆರಿಗೆ ಹಣವನ್ನು

19/12/2

ಗ್ರಾಮಪಂಚಾಯತಿಗೆ ಖಾತೆಗೆ ಜಮಾ ಮಾಡದೆ ಒಟ್ಟು **1,45,235/–** ರೂಪಾಯಿಗಳ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

14) ತನಿಖಾಧಿಕಾರಿ ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 17.11.2015 ರಂದು ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ, ಮಂಗಳೂರು ರವರು ಒಂದು ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಆಪಾದಿತರ ವಿರುದ್ಧದ ವಿಚಾರಣೆ ಮುಗಿದು ವರದಿಯನ್ನು ಈಗಾಗಲೇ ಸಲ್ಲಿಸಿರುವುದಾಗಿ ತಿಳಿಸಿದ್ದು, ದಿನಾಂಕ 6.01.2016 ರಂದು ಜಿಲ್ಲಾಧಿಕಾರಿಗಳು, ಮಂಗಳೂರು ರವರಿಗೆ ಪತ್ರ ಬರೆದು ಆಪಾದಿತ ಸರ್ಕಾರಿ ನೌಕರರು ವಿಚಾರಣೆ ಇರುವಾಗಲೇ ಪದೊನ್ನತಿ ನೀಡಿರುವ ಬಗ್ಗೆ ಸ್ಪಷ್ಟಿಕರಣ ಕೇಳಲಾಗಿ, ಸದರಿಯವರು ತಾನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಮಂಗಳೂರು ರವರಿಂದ ಆಪಾದಿತ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಹಣ ದುರುಪಯೋಗದ ಬಗ್ಗೆ ಯಾವುದೇ ವರದಿಯನ್ನು ಸ್ವೀಕರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

15) ತನಿಖಾಧಿಕಾರಿ ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ನಂತರ ತಾನು ವಿಚಾರಣಾ ವರದಿ ದಿನಾಂಕ 02.03.2016 ನ್ನು ಅಪರ ನಿಬಂಧಕರು, ವಿಚಾರಣೆಗಳು–7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರ ಮುಖಾಂತರ ಸಲ್ಲಿಸಿದ್ದು ಅದರ ಪ್ರತಿಯನ್ನು **ನಿ.ಪಿ–1 ಎಂದು** ಗುರುತಿಸಲಾಗಿರುತ್ತದೆ. ಅಸಲಿ ಪ್ರತಿಯನ್ನು ನಿ.ಪಿ–1(ಎ) ಎಂದು, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರು ಅಪರ ನಿಬಂಧಕರು, ವಿಚಾರಣೆಗಳ–7 ರವರಿಗೆ ಬರೆದ ಕವರಿಂಗ್ ಲೇಟರ್ ದಿನಾಂಕ 17–03–2016 ರ ದೃಢಿಕೃತ ಪ್ರತಿ **ನಿ.ಪಿ–2** ಎಂದು ಮತ್ತು ಅಸಲಿ ಕವರಿಂಗ್ ಲೇಟರ್ **ನಿ.ಪಿ–2(ಎ)** ಎಂದು, ಆಪಾದಿತ ಸರ್ಕಾರಿ ನೌಕರರ ದಿನಾಂಕ 11/08/2016 ರ ಆಕ್ಷೇಪಣೆ **ನಿ.ಪಿ–3** ಎಂದು, ದೂರು ಪ್ರಪತ್ರ–1, ಪ್ರಪತ್ರ–2 ಮತ್ತು ದೂರುದಾರರ ದಿನಾಂಕ 19.11.2014 ರ ದೂರು **ನಿ.ಪಿ–4 ರಿಂದ 6** ಎಂದು ಗುರುತಿಸಲಾಯಿತು.

16) ತನಿಖಾಧಿಕಾರಿ ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಲೆಕ್ಕಪರಿಶೋಧನಾ ವರದಿಯನ್ನು **ನಿ.ಪಿ-7** ಎಂದು, ಪಾಸ್‌ಬುಕ್ಕಿನ ನಕಲು ಪ್ರತಿಯನ್ನು **ನಿ.ಪಿ-8** ಎಂದು ಹಾಗೂ ಸ್ವೀಕೃತಿಯನ್ನು **ನಿ.ಪಿ-9** ಎಂದು ಗುರುತಿಸಲಾಯಿತು. ದಿನಾಂಕ 04.12.2010 ರಿಂದ 25.07.2011 ರವರೆಗಿನ ನಗದು ವಹಿಯನ್ನು **ನಿ.ಪಿ-10** ಎಂದು, 2011-12 ದಿನಾಂಕ 26.07.2011 ರಿಂದ 29.02.2012 ರವರೆಗಿನ ನಗದು ವಹಿಯನ್ನು **ನಿ.ಪಿ-11** ಎಂದು, ನಗದು ಪುಸ್ತಕ ದಿನಾಂಕ 29.02.2012 ರಿಂದ 16.04.2013 ರವರೆಗಿನ ವಹಿಯನ್ನು ನಿ.ಪಿ-12 ಎಂದು, ಗುರುತಿಸಿದ್ದು, ಸದರಿ ಅವಧಿಯಲ್ಲಿ ಆಪಾದಿತ ಸರ್ಕಾರಿ ನೌಕರರು ಸರ್ಕಾರಕ್ಕೆ ಸದರಿ ಹಣವನ್ನು ಜಮಾ ಮಾಡದೆ ಕರ್ತವ್ಯ ಲೋಪವೆಸಗಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

17) ತನಿಖಾಧಿಕಾರಿ ಪಿಡಬ್ಲ್ಯೂ-1 ರವರ ಮುಂದುವರೆದ ವಿಚಾರಣೆಯಲ್ಲಿ, 2010-11 ಮತ್ತು 2011-12 ರ ಅವಧಿಯಲ್ಲಿ ಆಪಾದಿತ ಸರ್ಕಾರಿ ನೌಕರರು ಕರ್ತವ್ಯದ ಮೇಲೆಹಾಜರಿದ್ದ ಬಗ್ಗೆ ಹಾಜರಾತಿ ವಹಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-13 ಎಂದು, ಸಿಂಡಿಕೇಟ್ ಬ್ಯಾಂಕಿನ ಸ್ಟೇಟ್‌ಮೆಂಟ್ ಆಫ್ ಅಕೌಂಟ್ದಿನಾಂಕ 01.04.2010 ರಿಂದ ದಿನಾಂಕ 31.03.2011 ರವರೆಗಿನ ದೃಢೀಕೃತ ಪ್ರತಿಯನ್ನು ನಿ.ಪಿ-14 ಎಂದು, ನಿ.ಪಿ-14 ರಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಣ ದುರುಪಯೋಗದ ಹಣ ಜಮಾ ಆದ ಬಗ್ಗೆ ಯಾವುದೇ ಎಂಟ್ರಿ ಇರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

18) ತನಿಖಾಧಿಕಾರಿ ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಲೆಕ್ಕಪರಿಶೋಧನಾ ವರದಿ 2010-11 ರ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು, ಅದನ್ನು ನಿ.ಪಿ-15 ಎಂದು, ಲೆಕ್ಕಪರಿಶೋಧನಾ ವರದಿ 2011-12 ರ ದೃಢೀಕೃತ ಪ್ರತಿಯನ್ನು ನಿ.ಪಿ-16 ಎಂದು, ಸದರಿ ನಿ.ಪಿ-15 ಮತ್ತು 16 ರಲ್ಲಿ ಆಪಾದಿತ ಸರ್ಕಾರಿ ನೌಕರರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಣ ಜಮಾಮಾಡದೇ ಇರುವ ಬಗ್ಗೆ ಉಲ್ಲೇಖಿಸಿರುತ್ತಾರೆ.

19/2/2

19) ತನಿಖಾಧಿಕಾರಿ ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಮಂಗಳೂರು ಇವರು ಸರ್ಕಾರಕ್ಕೆ ನೀಡಿರುವ ವರದಿಯನ್ನು ನಿ.ಪಿ-17 ಎಂದು, ಕೊಡುಪೆರಾರ್ ಗ್ರಾಮ ಪಂಚಾಯಿತಿ ಮೀಟಿಂಗ್‌ನ ನಡವಳಿಗಳ ದೃಢೀಕೃತ ಪ್ರತಿ ನಿ.ಪಿ-18 ಎಂದು ಸದರಿ ನಡವಳಿಯಲ್ಲಿ ಆಪಾದಿತ ಸರ್ಕಾರಿ ನೌಕರರು ಹಣ ದುರುಪಯೋಗ ಮಾಡಿದ ಬಗ್ಗೆ ಉಲ್ಲೇಖಿಸಿರುವುದು ಕಂಡು ಬಂದಿರುತ್ತದೆ. **ಪಾಟೀ ಸವಾಲಿನ ಸಂಬಂಧ ಆಪಾದಿತ ಸರ್ಕಾರಿ ನೌಕರರು ಮತ್ತು ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.**

20) ಈ ವಿಚಾರಣೆಗೆ ಸಂಬಂಧಿಸಿದಂತೆ, ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಪ್ರೇಮಲತ ಆಳ್ವ, ಉಪತಹಶೀಲ್ದಾರ್, ರವರು 2010-11 ಮತ್ತು 2011-12ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕು ಪಡುಪೆರಾರು ಗ್ರಾಮಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಓರ್ವ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ಪಂಚಾಯಿತಿಯ ಹಣ ದುರುಪಯೋಗ ಮಾಡಿ ಕರ್ತವ್ಯಲೋಪವೆಸಗಿರುವ ದೋಷಾರೋಪಣೆಗೆ ಸಂಬಂಧಿಸಿದಂತೆ, ಪಿ.ಡಬ್ಲ್ಯೂ-1 ರವರ ಸಾಕ್ಷ್ಯ **ನಿ.ಪಿ-1 ರಿಂದ 18 ರ ದಾಖಲಾತಿಗಳನ್ನು ಪರಿಶೀಲಿಸಲಾಗಿ,** ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಪ್ರೇಮಲತಾ ಆಳ್ವ ದಿನಾಂಕ 01.04.2008 ರಿಂದ 14.10.2009 ರವರೆಗೆ ಮತ್ತು 18.07.2010 ರಿಂದ 28.02.2011 ರವರೆಗೆ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಪಡುಪೆರಾರ ಗ್ರಾಮಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಈ ಪ್ರಕರಣದ ತನಿಖಾಧಿಕಾರಿ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರು ದೂರುದಾರ ಶ್ರೀ **ಎಫ್ರೆಮ್ ರೊಡ್ರಿಗಸ್,** ಪ್ರಶಾಂತ್ ಭಾಗ್, ಪಡೀಲ್ ಅಂಚೆ, ಮಂಗಳೂರು ರವರು ಸಲ್ಲಿಸಿರುವ ದೂರಿನಲ್ಲಿ 2010-11 ಮತ್ತು 2011-12ನೇ ಸಾಲಿನಲ್ಲಿ ಪಡುಪೆರಾರ ಗ್ರಾಮ ಪಂಚಾಯತ್‌ನಲ್ಲಿ ಸುಮಾರು ಲಕ್ಷಕ್ಕೂ ಮೀರಿ ಸಾರ್ವಜನಿಕರ ತೆರಿಗೆಯ ಹಣ ದುರುಪಯೋಗ ಆಗಿದ್ದು, ತನಿಖೆಕೈಗೊಳ್ಳಬೇಕೆಂದು ಕೋರಿರುವುದು ಕಂಡು ಬಂದಿರುತ್ತದೆ.

21) ತನಿಖಾಧಿಕಾರಿಯವರು ಸದರಿ ಹಣದ ದುರುಪಯೋಗದ ಬಗ್ಗೆ ದಿನಾಂಕ 09.12.2015 ಪಡುಪೆರಾರ ಗ್ರಾಮಪಂಚಾಯತಿಗೆ ಭೇಟಿ ನೀಡಿ, 2010–11 ಮತ್ತು 2011–12 ನೇ ಸಾಲಿಗೆ ಸಂಬಂಧಪಟ್ಟ, ಲೆಕ್ಕಪರಿಶೋಧನಾ ವರದಿ **ನಿ.ಪಿ–7,** ಪಾಸ್‌ಬುಕ್ಕಿನ ನಕಲು ಪ್ರತಿಯನ್ನು **ನಿ.ಪಿ–8,** ಸ್ವೀಕೃತಿಯನ್ನು **ನಿ.ಪಿ–9,** ದಿನಾಂಕ 04.12.2010 ರಿಂದ 25.07.2011 ರವರೆಗಿನ ನಗದು ವಹಿ **ನಿ.ಪಿ–10,** 2011–12 ದಿನಾಂಕ 26.07.2011 ರಿಂದ 29.02.2012 ರವರೆಗಿನ ನಗದು ವಹಿ **ನಿ.ಪಿ–11,** ನಗದು ಪುಸ್ತಕ ದಿನಾಂಕ 29.02.2012 ರಿಂದ 16.04.2013 ರವರೆಗಿನ ವಹಿ **ನಿ.ಪಿ–12,** 2010–11 ಮತ್ತು 2011–12 ರ ಅವಧಿಯಲ್ಲಿ ಆಪಾದಿತ ಸರ್ಕಾರಿ ನೌಕರರು ಕರ್ತವ್ಯದ ಮೇಲೆಹಾಜರಿದ್ದ ಬಗ್ಗೆ ಹಾಜರಾತಿ ವಹಿಯ ದೃಢೀಕೃತ ಪ್ರತಿ **ಪಿ–13,** ಸಿಂಡಿಕೇಟ್ ಬ್ಯಾಂಕಿನ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ದಿನಾಂಕ 01.04.2010 ರಿಂದ ದಿನಾಂಕ 31.03.2011 ರವರೆಗಿನ ದೃಢೀಕೃತ ಪ್ರತಿ ನಿ.ಪಿ–14, ನಿ.ಪಿ–14 ರಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಣ ದುರುಪಯೋಗದ ಹಣ ಜಮಾ ಆದ ಬಗ್ಗೆ ಯಾವುದೇ ಎಂಟ್ರಿ ಇರುವುದಿಲ್ಲವೆಂದು, ಲೆಕ್ಕಪರಿಶೋಧನಾ ವರದಿ 2010–11 ರ ದೃಢೀಕೃತ ಪ್ರತಿ ನಿ.ಪಿ–15, ಲೆಕ್ಕಪರಿಶೋಧನಾ ವರದಿ 2011–12 ರ ದೃಢೀಕೃತ ಪ್ರತಿಯನ್ನು ನಿ.ಪಿ–16, ನಿ.ಪಿ–15 ಮತ್ತು 16 ರಲ್ಲಿ ಆಪಾದಿತ ಸರ್ಕಾರಿ ನೌಕರರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಣ ಜಮಾಮಾಡದೇ ಇರುವ ಬಗ್ಗೆ ಉಲ್ಲೇಖಿಸಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಮಂಗಳೂರು ಇವರು ಸರ್ಕಾರಕ್ಕೆ ನೀಡಿರುವ ವರದಿ ನಿ.ಪಿ–17, ಕೊಡುಪೆರಾರ್ ಗ್ರಾಮ ಪಂಚಾಯಿತಿ ಮೀಟಿಂಗ್‌ನ ನಡವಳಿಗಳ ದೃಢೀಕೃತ ಪ್ರತಿ ನಿ.ಪಿ–18 ರಲ್ಲಿ ಸದರಿ ನಡವಳಿಯಲ್ಲಿ ಆಪಾದಿತ ಸರ್ಕಾರಿ ನೌಕರರು ಹಣ ದುರುಪಯೋಗ ಮಾಡಿದ ಬಗ್ಗೆ ಉಲ್ಲೇಖಿಸಿರುವುದು ಕಂಡು ಬಂದಿದ್ದು, ಸದರಿ ನಿ.ಪಿ–1 ರಿಂದ 18 ದಾಖಲಾತಿಗಳನ್ನು ಪಡುಪೆರಾರ ಗ್ರಾಮಪಂಚಾಯತಿಯಿಂದ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

22) ಪಿಡಬ್ಲ್ಯೂ–1 ರವರು ನಿ.ಪಿ–1 ರಿಂದ 18 ರ ದಾಖಲಾತಿಗಳನ್ನು ಪಡೆದುಕೊಂಡು ತನಿಖೆ ಕೈಗೊಂಡು ಪರಿಶೀಲಿಸಿ, **ನಿ.ಪಿ–1(ಎ)** ರಂತೆ ದಿನಾಂಕ 02/03/2016 ರಂದು ವರದಿ ಸಲ್ಲಿಸಿರುವುದಾಗಿ ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದು ಕಂಡು ಬರುತ್ತದೆ.

23) ತನಿಖಾಧಿಕಾಯವರ ವರದಿಯಲ್ಲಿ ದಿನಾಂಕ 15.02.2016 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ರವರು ವರದಿಯನ್ನು ನೀಡಿದ್ದು, ಸದರಿ ವರದಿಯಲ್ಲಿ ಮಂಗಳೂರು ತಾಲ್ಲೂಕು, ಪಡುಪೆರಾರ ಗ್ರಾಮ ಪಂಚಾಯತ್‌ನಲ್ಲಿ ಗುಮಾಸ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕುಮಾರಿ ಗಾಯತ್ರಿ ರವರು ಹಣಕಾಸಿನ ವ್ಯವಹಾರ ಮಾಡುತ್ತಿದ್ದು, ಪ್ರತಿದಿನ ಗ್ರಾಮಪಂಚಾಯತಿಯಲ್ಲಿ ವಸೂಲಿ ಮಾಡುತ್ತಿದ್ದ ತೆರಿಗೆ ಹಣವನ್ನು ಪೂರ್ತಿಯಾಗಿ ಪಂಚಾಯತ್ ನಿಧಿಗೆ ಜಮೆ ಮಾಡದೆ ರೂ. 2,47,482/- ದುರಪಯೋಗಪಡಿಸಿಕೊಂಡಿರುವುದು ಲೆಕ್ಕ ಪರಿಶೋದನೆ ಸಂದರ್ಭ ತಿಳಿದು ಬಂದಿದ್ದು, **ದಿನಾಂಕ 01.04.2008 ರಿಂದ 30.09.2011 ರವರೆಗೆ ಸದರಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಪ್ರೇಮಲತಾ ಆಳ್ವ ಕಾರ್ಯದರ್ಶಿ ಇವರಿಂದ ರೂ. 1,45,235/-,** ಶ್ರೀ ಮಾಧವ ಅಮೀನ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರಿಂದ 56,255/- ಮತ್ತು ಶ್ರೀ ಓಲಿವರ್ ಓಸ್ವಾಲ್ಡ್ ಪಿಂಟೋ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರಿಂದ ರೂ. 45,922/- ನ್ನು ದುರುಪಯೋಗವಾಗಿರುವುದಾಗಿ ನಮೂದಿಸಿರುತ್ತಾರೆ. ಗುಮಾಸ್ತೆಯಿಂದ ಈ ರೀತಿ ದುರುಪಯೋಗವಾಗಲು ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಯವರ ಬೇಜವಾಬ್ದಾರಿಯೇ ಕಾರಣವಾಗಿರುವುದರಿಂದ ಅವರಿಗೆ ಈ ಕಛೇರಿಯಿಂದ "ಎಚ್ಚರಿಕೆ ನೋಟಿಸ್" ಜಾರಿ ಮಾಡಲಾಗಿದೆ ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಕೈಗೊಂಡಿರುವುದಿಲ್ಲವೆಂದು ವರದಿಯಲ್ಲಿ ಕಂಡುಬಂದಿರುತ್ತದೆ.

24) ತನಿಖಾಧಿಕಾರಿಯವರು, ತನಿಖೆಯಿಂದ 2010-11 ಮತ್ತು 2011-12 ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕು ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀಮತಿ ಪ್ರೇಮಲತಾ ಆಳ್ವ ರವರು ಓರ್ವ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ತನ್ನ ಕರ್ತವ್ಯ ಮರೆತು ಪಂಚಾಯತಿಯ ಹಣ ರೂ. 1,42,235/- ಗಳನ್ನು ದುರುಪಯೋಗ ಮಾಡಿಕೊಂಡಿರುವುದಾಗಿ **ನಿ.ಪಿ-1(ಎ)** ವರದಿ ಸಲ್ಲಿಸಿರುವುದು ಕಂಡು ಬರುತ್ತದೆ.

19/2/

25) ಆಪಾದಿತ ಸರ್ಕಾರಿ ನೌಕರರು ದಿನಾಂಕ 23/03/2019 ರಿಂದ ವಿಚಾರಣೆ ಮುಗಿಯುವವರೆಗೆ ಅಂದರೆ ದಿನಾಂಕ 14/02/2022 ರವರೆಗೆ ಗೈರು ಹಾಜರಾಗಿದ್ದು ಪಿಡಬ್ಲ್ಯೂ-1 ರವರ ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ ತಮ್ಮ ಪರವಾಗಿ ತಮ್ಮನ್ನು ವಿಚಾರಣೆ ಮಾಡಿಕೊಂಡಿರುವುದಿಲ್ಲ ಹಾಗೂ ಲಿಖಿತ ವಾದವನ್ನು ಸಲ್ಲಿಸಿರುವುದಿಲ್ಲ.

26) ಮೇಲ್ಕಂಡ ಅಂಶಗಳಿಂದ, ಪಿಡಬ್ಲ್ಯೂ-1 ತನಿಖಾಧಿಕಾರಿಯವರ ಸಾಕ್ಷ್ಯ, ನಿ.ಪಿ-1 ರಿಂದ 18 ರ ದಾಖಲಾತಿಗಳಿಂದ, ಆ.ಸ.ನೌರವರು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ತೆರಿಗೆ ಹಣವನ್ನು ಗ್ರಾಮ ಪಂಚಾಯತಿಯ ಖಾತೆಗೆ ಜಮಾ ಮಾಡದೆ ಒಟ್ಟು ರೂ. 1,45,235/- ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡು ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

27) ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(ii) ಮತ್ತು (iii) ರಡಿಯಲ್ಲಿ, ಆ.ಸ.ನೌ ರವರು ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ **ಶ್ರೀಮತಿ ಪ್ರೇಮಲತ ಆಳ್ವ**, ಉಪತಹಸೀಲ್ದಾರ್, ಗುರುಪುರ ನಾಡಕಚೇರಿ, ಮಂಗಳೂರು, ದ.ಕ.ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**19ನೇ ಫೆಬ್ರವರಿ 2022.**

**(ಜಿ. ನಂಜುಂಡಯ್ಯ)**
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| LIST OF WITNESS EXAMINED ON BEHALF OF DISCIPLINARY AUTHORITY : | |
|---|---|
| PW-1 : Sri. Sudham Bommaiah Nayak, (Investigation Officer) (original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1 : | True copy of Investigation Report dated 02-03-2016 (True Copy) |
| Ex.P.1(a) : | Original Investigation Report dated 02-03-2016 (Original) |
| Ex.P.2 : | Forwarding letter of Superintendent of Police, Karnataka Lokayukta, Mangaluru dated 17-03-2016 addressed to ARE-7 along with report of SP (True Copy 75 xerox 76 to 80) |
| Ex.P 2(a) | Original forwarding letter with investigation report of SP (Original) |
| Ex.P.3 : | Comments of DGO dated 11.08.2016 (Original) |
| Ex.P.4 to 6 : | Form No. I (Complaint), Form No. II (Affidavit) and complaint of complainant dated 19.11.2014 (Original) |
| Ex.P-7 | Audit report along with covering letter of Chief Accounts Officer, Zilla Panchayath, Mangaluru dated 18.11.2011. (Xerox) |
| Ex.P-8 & 9 | Copy of pass book and receipt (Xerox) |

| | |
|---|---|
| Ex. P-10 | Certified Copy of Cash Register extract from 04.12.2010 to 25.07.2011 (Certified Copy) |
| Ex. P-11 | Certified Copy of Cash Register extract from 26.07.2011 to 29.02.2012 (Certified Copy) |
| Ex. P-12 | Certified Copy of Cash Register extract from 29.02.2012 to 16.04.2013 (Certified Copy) |
| Ex. P-13 | Certified Copy of attendance register extract for the period 2010-11 and 2011-12 pertains to DGO (Certified Copy) |
| Ex. P-14 | Certified Copy of statement of accounts of Syndicate Bank from 01.04.2010 to 31.03.2011 (Certified Copy) |
| Ex. P-15 | Certified Copy of audit report for the year 2010-11 of Paduperar Gram Panchayath (Certified Copy) |
| Ex. P-16 | Certified Copy of audit report for the year 2011-12 of Paduperar Gram Panchayath (Certified Copy) |
| Ex. P-17 | Chief Executive Officer, Zilla Panchayath, Mangaluru submitted report to Government (Xerox) |

| | |
|---|---|
| Ex. P-18 | Certified Copy of meeting resolution of Paduperar Gram Panchayath |

**DGO Already retired from service.**

**19th February 2022.**

19/2/22

**( G. NANJUNDAIAH )**
Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/789/2016/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **21/02/2022**

**RECOMMENDATION**

Sub:- Departmental inquiry against;
Smt. Premalatha Alva, Deputy Tahsildar, Gurupura Nada Kacheri, Mangaluru Taluk, Dakshina Kannada District – Reg.

Ref:- 1) Govt. Order No. **ಕಂಇ 281 ಬಿಎಂಎಂ 2016,** Bengaluru dated 12-14/12/2016.

2) Nomination order No.UPLOK-2/DE/789/2016, Bengaluru dated 31/12/2016 of Upalokayukta, State of Karnataka, Bengaluru

3) Inquiry Report dated 19/2/2022 of Additional Registrar of Enquiries-10, Karnataka Lokayukta, Bengaluru

----

The Government by its order dated 12-14/12/2016 initiated the disciplinary proceedings against Smt. Premalatha Alva, Deputy Tahsildar, Gurupura Nada Kacheri, Mangaluru Taluk, Dakshina Kannada District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/789/2016 Bengaluru dated 31/12/2016 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by her.

3. The charge against the DGO Smt. Premalatha Alva, Deputy Tahsildar, Gurupura Nada Kacheri, Mangaluru Taluk, Dakshina Kannada District is that while she was working as Secretary at Paduperaru Grama Panchayath, Mangaluru Taluk during the year 2010-11 and 2011-12 has misappropriated the Panchayath funds.

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has proved the above charge against DGO Smt. Premalatha Alva, Deputy Tahsildar, Gurupura Nada Kacheri, Mangaluru Taluk, Dakshina Kannada District. Further, the inquiry officer has held that the DGO has misappropriated a sum of Rs.1,45,235/- to the Panchayath, by not remitting the tax collected to the Panchayath accounts.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, she has retired from service on 31/7/2016.

7. Having regard to the nature of charge proved against DGO Smt. Premalatha Alva, Deputy Tahsildar, Gurupura Nada Kacheri, Mangaluru Taluk, Dakshina Kannada District, it is hereby recommended to the Government for imposing penalty of withholding 10% of pension payable to DGO Smt. Premalatha Alva

for a period of 5 years, apart from recovering a sum of Rs.1,45,235/- from the pension payable to DGO.

8. Action taken in the matter shall be intimated to this Authority.

Connected records are enclosed herewith.

21/2/22

**(JUSTICE B.S.PATIL)**
Upalokayukta,
State of Karnataka,
Bengaluru